# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:01-03-2019ರ ನಡವಳಿಗಳು

**ವಿಷಯದ ಸಂಖ್ಯೆ: ವಾಕಾಸ್ಥಾಸ/674/2018-19**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯಕ್ಕೆ ಸೇರಿರುವ ವಾರ್ಡ್-12 ಕ್ಕೆ 2018-19ನೇ ಸಾಲಿನ ಅಯವ್ಯಯದ ಲೆಕ್ಕ ಶೀರ್ಷಿಕೆ ಪಿ-3442 (Development works at ward ) ಅಡಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್ ಕೋಡ್ ಪಡೆದಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| Sl.No | Name of work | Est.cost (Rs. In lakhs) | Job code No. |
|---|---|---|---|
| 1 | Improvements to roads and drains at surya Enclave roads and other roads in ward No.12 Shettyhallli sub division | 100.00 | 012-19-000017 |

ಮೇಲ್ಕಾಣಿಸಿದ ಕಾಮಗಾರಿಯನ್ನು ಪಾಲಿಕೆಯ ಸದಸ್ಯರಾದ ಶ್ರೀ.ಕೆ.ನಾಗಭೂಷಣ್ ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ:100.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಅನುಮೊದನೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣೆ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ-12/2018, ದಿನಾಂಕ:06-04-2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್- ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಛೇರಿ ಟಿಪ್ಪಣಿ ಸಂಖ್ಯೆ:1075/2018-19, ದಿನಾಂಕ;11-07-2018ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್. ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್-12 ರಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ನಿರ್ಣಯ ಕೋರಿ ಸಮಿತಿ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ) 7305/2018-19, ದಿನಾಂಕ:18-02-2019 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರರವರ ಕಛೇರಿ ಸಂಖ್ಯೆ:8303/2018-19, ದಿ:22-02-2019 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರವರ ದಿನಾಂಕ:22-02-2019ರ ಟಿಪ್ಪಣಿ.

ನಿರ್ಣಯ:- ಮುಂದೂಡಿದೆ

-1-

ಅ|08|03|19 ರ ತೀರ್ಮಾನ:- ಬಹುಮತದಿಂದ ಅಳಿಸಲಾಯಿತು

ಕ|19|06|19 ರ ತೀರ್ಮಾನ:- ಬಹುಮತದಿಂದ. ಅಳಿಸಲಾಯಿತು

ಅ|17|07|19 ರ ತೀರ್ಮಾನ ಸಡಿಲಿಸಲಾಗಿದೆ

ನಿರ್ಣಯ:- ಪ್ರಧಾನ ಅಭಿಯಂತರವರ ಪತ್ರ ದಿ|22|02|19 ರ ಬೆಂಪ್ರೆಗಾಂಣ ಕುರಿತ್ತು ಅಧಿಕಾರಿಗಳಿಂದಿಗೆ ಚರ್ಚಿಸಿಲಾಗಿರುತ್ತ, ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇರುವುದಾಗಿ ಅಭಿಪ್ರಾಯಿಸಿದ ಮೇರೆಗೆ ಪ್ರಸ್ತಾಪಿತ ಕಾಮಗಾರಿಯನ್ನು ಟೆಂ.ಕೆ.ಆರ್.ಪು.ಟಿ.ವಿಲ್. ತಿರುಪತಿಯ ಪತ್ರದಿಂದ ಕೈಗೆಗೊಳ್ಳಲು ನಿಯಮಾನುಸಾರ ಅಂತುಕ್ಕೆರವು ಅಗತ್ಯ ಕ್ರಮ ಕೈಗೊಳ್ಳುವಂತೆ - ಎಂದು ತೀರ್ಮಾನಿಸಿತು.

ಅಧ್ಯಕ್ಷರು

ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಕ್ರ ಸಂ | ಶ್ರೀಯುತರ ಹೆಸರು | ಪದನಾಮ | ನಿರ್ಣಯದ ಪರವಾಗಿ ಸಹಿ |
|---|---|---|---|
| 1 | ಉಮೇಸಲ್ಮಾ | ಅಧ್ಯಕ್ಷರು | |
| 2 | ದೀಪಿಕಾ.ಎಲ್.ಮಂಜುನಾಥರೆಡ್ಡಿ | ಸದಸ್ಯರು | Deepika L Manjunatha Reddy |
| 3 | ಎಂ.ಶಾಮಲ | ಸದಸ್ಯರು | M. Shamala |
| 4 | ಇಂದಿರಾ.ಜಿ | ಸದಸ್ಯರು | Indira |
| 5 | ಜಯಲಕ್ಷ್ಮಮ್ಮ ಪಿಳ್ಳಪ್ಪ | ಸದಸ್ಯರು | |
| 6 | ಶ್ರೀಲತ ಸಿ.ಜಿ.ಗೋಪಿನಾಥರಾಜು | ಸದಸ್ಯರು | Sri Latha |
| 7 | ಕೆ.ದೇವದಾಸ | ಸದಸ್ಯರು | |
| 8 | ನೇತ್ರಾವತಿ ಕೃಷ್ಣೇಗೌಡ | ಸದಸ್ಯರು | Nethravathi |
| 9 | ಶಿಲ್ಪ ಅಭಿಲಾಶ್ | ಸದಸ್ಯರು | |
| 10 | ಎನ್.ಮಂಜುನಾಥ್ | ಸದಸ್ಯರು | N. Manjunath |
| 11 | ಆರ್.ಪದ್ಮಾವತಿ ಅಮರನಾಥ್ | ಸದಸ್ಯರು | padmavathi. R |

569

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ

ವಿಷಯ:- ಪಾಲಿಕೆ ವ್ಯಾಪ್ತಿಯಲ್ಲಿ ಬರುವ ದಾಸರಹಳ್ಳಿ ವಲಯದ ವಾರ್ಡ್ ನಂ:12 ರಲ್ಲಿನ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ವಹಿಸಿಕೊಡುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು ರವರ ಆದೇಶ ಸಂ:ಪಿಎಸ್ಆರ್(ಜಿ)/7305/18-19 ದಿನಾಂಕ: 18/2/19

* * * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯಕ್ಕೆ ಸೇರಿರುವ ವಾರ್ಡ್ ನಂ:12 ರ 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ-3442 (Developmental Works at Ward) ರ ಅಡಿ ಪ್ರಸ್ತಾಪಿತ ಕಾಮಗಾರಿಯ ಜಾಬ್ ಕೋಡ್ ಪಡೆದಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| SL No | Name of work | Job Code No | Est Cost (Rs. in Lakhs) |
|---|---|---|---|
| 1 | Improvements to Roads and Drains at Surya Enclave Roads and other Roads in Ward No.12 Shettyhalli Sub Division | 012-19-000017 | 100.00 |

ಈ ಮೇಲ್ಕಾಣಿಸಿದ ಕಾಮಗಾರಿಯನ್ನು ಪಾಲಿಕೆಯ ಸದಸ್ಯರಾದ ಶ್ರೀ.ಕೆ.ನಾಗಭೂಷಣ್ ರವರು ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.100.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ:12/2018, ದಿನಾಂಕ:06/04/2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್-ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಠ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:1075/18-19, ದಿನಾಂಕ:11/07/2018 ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿ ಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ, ವಾರ್ಡ್ ನಂ:12 ರಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಅನುಷ್ಟಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ನಿರ್ಣಯ ಕೋರಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

ಪ್ರಧಾನ ಅಭಿಯಂತರರು (ಪ್ರಭಾರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.